800 ಶ್ರೀ ಶ್ರೀನಿವಾಸ್ ಎಂ.(ಮಂಡ್ಯ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ತೋಟಗಾರಿಕೆ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಳೆದ 15 ವರ್ಷಗಳಿಂದಲೂ ಈ ಹುದ್ದೆಗಳನ್ನು ತುಂಬದಿರಲು ಕಾರಣಗಳೇನು;

ಇ) ಈ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ, ಯಾವಾಗ ಈ ಹುದ್ದೆಗಳನ್ನು ತುಂಬಲಾಗುವುದು, (ವಿವರ ನೀಡುವುದು)?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) ಪ್ರೌಢಶಾಲೆಯ ಸಿಬ್ಬಂದಿ ಮಾದರಿ ಪ್ರಕಾರ ಪ್ರತಿಯೊಂದು ಸರ್ಕಾರಿ ಪ್ರೌಢಶಾಲೆಗೆ 06 ಸಹ ಶಿಕ್ಷಕರ ಹುದ್ದೆ ಮತ್ತು 01 ವಿಶೇಷ ಶಿಕ್ಷಕರ ಹುದ್ದೆಗೆ ಅವಕಾಶವಿದೆ.

ವಿಶೇಷ ಶಿಕ್ಷಕರಲ್ಲಿ ವೃತ್ತಿ ಶಿಕ್ಷಕರು, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ ಹುದ್ದೆಗಳು ಸೇರಿರುತ್ತವೆ.

ವೃತ್ತಿ ಶಿಕ್ಷಣ ಶಿಕ್ಷಕರ ವೃಂದದಲ್ಲಿ 13 ವಿಧದ ಹುದ್ದೆಗಳಿವೆ. ಇದರಲ್ಲಿ ತೋಟಗಾರಿಕೆ ಹುದ್ದೆಯು ಒಂದಾಗಿದೆ. ಈ ವಿಶೇಷ ಶಿಕ್ಷಕರ ವೃಂದಕ್ಕೆ ವಾರಕ್ಕೆ ಕೇವಲ 12 ಗಂಟೆ ಕಾರ್ಯಭಾರವಿರುತ್ತದೆ. ತೋಟಗಾರಿಕೆ ಶಿಕ್ಷಕರ ಹುದ್ದೆಗಳನ್ನು ಸಂಬಂಧಪಟ್ಟ ಶಾಲೆಯಲ್ಲಿ ಒದಗಿಸಿಕೊಂಡಿರುವ ಮೂಲಭೂತ ಅವಶ್ಯಕತೆಗಳಿಗೆ ಅನುಗುಣವಾಗಿ ಭರ್ತಿ ಮಾಡಲಾಗುತ್ತಿದೆ.

1986 ರಲ್ಲಿ 178 ತೋಟಗಾರಿಕಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. 2007–08ನೇ ಸಾಲಿನಲ್ಲಿ 91 ತೋಟಗಾರಿಕಾ ಅರೆಕಾಲಿಕ ಶಿಕ್ಷಕರನ್ನು ಸಕ್ರಮಗೊಳಿಸಲಾಗಿದೆ.

ಇ) 2001–02ನೇ ಸಾಲಿನಿಂದ 2008–09ನೇ ಸಾಲಿನವರೆಗೆ ಹೊಸದಾಗಿ ಮಂಜೂರಾದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಸುಮಾರು 627 ವೃತ್ತಿ ಶಿಕ್ಷಣ ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಈ ಶಾಲೆಗಳಲ್ಲಿ ವೃತ್ತಿ ಶಿಕ್ಷಣಕ್ಕೆ ಕಲ್ಪಿಸಿಕೊಂಡಿರುವ ಸೌಲಭ್ಯಗಳಿಗೆ ಅನುಗುಣವಾಗಿ ಯಾವ ವೃತ್ತಿ ಶಿಕ್ಷಕ ಹುದ್ದೆಗಳನ್ನು ಮಂಜೂರು ಮಾಡಬೇಕೆಂಬ ಬಗ್ಗೆ ಗುರ್ತಿಸಿ, ನೇಮಕಾತಿ ಮಾಡಬೇಕಾಗುತ್ತದೆ.

ಪ್ರಸ್ತುತ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವೃತ್ತಿ ಶಿಕ್ಷಕರ ವಿದ್ಯಾರ್ಹತೆಯ ಬಗ್ಗೆ ಗೊಂದಲವಿದ್ದು ಈ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿವೆ. ಆದುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲು ಪರಿಶೀಲಿಸಲಾಗುತ್ತಿದೆ. ತಿದ್ದುಪಡಿಯಾದ ನಂತರ ತೋಟಗಾರಿಕೆ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಯಾದ ಕೂಡಲೇ ವೃತ್ತಿ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

466 ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ಪಟ್ಟಣ ನಗರ ಆಶ್ರಯ ಯೋಜನೆ ಅಡಿಯಲ್ಲಿ ಬಡವರಿಗಾಗಿ ಆಶ್ರಯ ಯೋಜನೆ ಮನೆಗಳ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ವಿ. ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ಹೌದು.

ಆ) ಸೇಡಂ ನಗರಕ್ಕೆ ಈ ಕೆಳಗಿನಂತೆ ಮನೆಗಳ ಗುರಿಯನ್ನು ನೀಡಲಾಗಿದ್ದು, ಅದರ ಪ್ರಗತಿ ವಿವರವು ಈ ಕೆಳಗಿನಂತೆ ಇರುತ್ತದೆ.

ನಗರ ಆಶ್ರಯ ಯೋಜನೆಯಡಿಯಲ್ಲಿ ಈ ವರೆಗೆ ಪೂರ್ಣಗೊಂಡ ಮತ್ತು ಪ್ರಗತಿಯಲ್ಲಿರುವ ಮನೆಗಳ ವಿವರ

ಜಿಲ್ಲೆ	ತಾಲ್ಲೂಕು	ವರ್ಷ	ಗುರಿ	ಪೂರ್ಣಗೊಂಡ ಮನೆಗಳು	ಪ್ರಗತಿಯಲ್ಲಿರುವ ಮನೆಗಳು				ಪ್ರಾರಂಭವಾಗದ ಮನೆಗಳು
					ತಳಪಾಯ	ಗೋಡೆ	ಧಾವಣಿ	ಒಟ್ಟು	
ಗುಲಬರ್ಗಾ	ಸೇಡಂ ಟಿಎಂಸಿ	1995–1996	75	75	0	0	0	0	0
ಗುಲಬರ್ಗಾ	ಸೇಡಂ ಟಿಎಂಸಿ	1997–1998	90	90	0	0	0	0	0
ಗುಲಬರ್ಗಾ	ಸೇಡಂ ಟಿಎಂಸಿ	1999–2000	58	58	0	0	0	0	0
ಗುಲಬರ್ಗಾ	ಸೇಡಂ ಟಿಎಂಸಿ	2000–2001	58	58	0	0	0	0	0
ಗುಲಬರ್ಗಾ	ಸೇಡಂ ಟಿಎಂಸಿ	2001–2002	0	0	0	0	0	0	0
ಗುಲಬರ್ಗಾ	ಸೇಡಂ ಟಿಎಂಸಿ	2002–2003	0	0	0	0	0	0	0